

ಉಪ್ಪು ಮರಳುಗಾಡಿನಲ್ಲಿ ಬೆರಗುಗೊಳಿಸುವ ಸೂರ್ಯೋದಯ

ಕೋರ್ಸ್, ರಾಕ್ ಕ್ಲೈಂಬಿಂಗ್, ಝಿಪ್ ಲೈನ್ ಮತ್ತು ಪ್ಯಾರಾ ಮೋಟಾರಿಂಗ್‌ನಂತಹ ಹಲವಾರು ತರಹದ ಸಾಹಸ ಚಟುವಟಿಕೆಗಳಲ್ಲಿ ಭಾಗವಹಿಸಿ ಮನತಣಿಸಿಕೊಳ್ಳಬಹುದು. ಆದರೆ ಇವುಗಳಿಗಾಗಿ ಪ್ರತ್ಯೇಕ ಶುಲ್ಕ ಪಾವತಿಸಬೇಕಾಗುತ್ತದೆ.

ಪ್ರತಿದಿನ ಸಂಜೆ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತವೆ. ವರ್ಣರಂಜಿತ ಉಡುಪುಗಳಲ್ಲಿ ವಿಜೃಂಭಿಸುವ ಕಲಾವಿದರು ಗುಜರಾತಿನ ಸಂಸ್ಕೃತಿಯನ್ನು ಪ್ರತಿಧ್ವನಿಸುವ ಗಾರ್ಭಾ, ದಾಂಡಿಯಾ ಮತ್ತು ಇತರ ಸಾಂಪ್ರದಾಯಿಕ ಜಾನಪದ ನೃತ್ಯಗಳನ್ನು ಪ್ರದರ್ಶಿಸುತ್ತಾರೆ. ಗುಜರಾತಿನ ವಿವಿಧ ಭಾಗಗಳಿಂದಲ್ಲದೇ ವಿಶ್ವದ ಅನೇಕ ದೇಶಗಳಿಂದ ಬರುವ ಹಲವಾರು ಸಾಂಸ್ಕೃತಿಕ ಕಲಾ ತಂಡಗಳು ಇದರಲ್ಲಿ ಭಾಗವಹಿಸುತ್ತವೆ. ಪ್ರವಾಸಿಗರು ಸಹ ಇದರಲ್ಲಿ ಪಾಲ್ಗೊಳ್ಳಬಹುದು. ಈ ವರ್ಷ ಸ್ಥಳೀಯ ಕಲಾವಿದರ ಜೊತೆಗೆ 12 ದೇಶಗಳಿಂದ ಆಗಮಿಸಿದ 250 ಕಲಾವಿದರು ಅದ್ಭುತ ಪ್ರದರ್ಶನಗಳನ್ನು ನೀಡಿ ಕಲಾಸಕ್ತರನ್ನು ರಂಜಿಸಿದರು.



ಈ ಉತ್ಸವದ ತವರಾದ ಧೋರ್ಡೊ ಗ್ರಾಮವನ್ನು 'ರಣ್ ಉತ್ಸವದ ಹೆಬ್ಬಾಗಿಲು' ಎಂದು ಕರೆಯುತ್ತಾರೆ. ಈ ಗ್ರಾಮವನ್ನು 2023ರಲ್ಲಿ ವಿಶ್ವ ಪ್ರವಾಸೋದ್ಯಮ ಸಂಸ್ಥೆಯಿಂದ ಅತ್ಯುತ್ತಮ ಪ್ರವಾಸೋದ್ಯಮ ಗ್ರಾಮಗಳ ಪೈಕಿ ಒಂದೆಂದು ಪರಿಗಣಿಸಲಾಗಿದೆ. 2023ರ ಫೆಬ್ರುವರಿಯಲ್ಲಿ ಭಾರತದ ಅಧ್ಯಕ್ಷತೆಯಲ್ಲಿ ನಡೆದ ಜಿ20ಯ ಮೊದಲ ಪ್ರವಾಸೋದ್ಯಮ ಕಾರ್ಯಗುಂಪಿನ ಸಭೆಗೆ ಆತಿಥ್ಯ ವಹಿಸಿದ ಹಿರಿಮೆ ಈ ಗ್ರಾಮದ್ದು. ರಣ್‌ನ ಮಾಂತ್ರಿಕ ಸೌಂದರ್ಯವು ಸಹಜವಾಗಿಯೇ ಚಲನಚಿತ್ರ ನಿರ್ಮಾಪಕರನ್ನು ಸೆಳೆಯುತ್ತದೆ. ಈ ಪ್ರದೇಶದಲ್ಲಿ ಚಿತ್ರೀಕರಣಗೊಂಡ ಬಾಲಿವುಡ್ ಸಿನಿಮಾಗಳ ದೃಶ್ಯಗಳು, ಹಾಡುಗಳು ಆಯಾ ಚಿತ್ರಕ್ಕೆ ಮಾಂತ್ರಿಕ ಸ್ಪರ್ಶ ನೀಡಿವೆ.

ಒಟ್ಟಾರೆ ರಣ್ ಉತ್ಸವವು ಗುಜರಾತಿನ ಕಲೆ, ಸಂಗೀತ, ಪರಂಪರೆ ಮತ್ತು ಸಂಪ್ರದಾಯಗಳನ್ನು ಸಂಭ್ರಮಿಸುವ ಒಂದು ಅದ್ಭುತ ಸಾಂಸ್ಕೃತಿಕ ಉತ್ಸವ. ಇದೇ ಕಾರಣದಿಂದ ಈ ಉತ್ಸವವನ್ನು 'ರಣ್ ಆಫ್ ಕಚ್‌ನ ಓಯಸಿಸ್' ಎಂದು ಕರೆಯುತ್ತಿರುವುದರಲ್ಲಿ ಯಾವುದೇ ಉತ್ಪ್ರೇಕ್ಷೆಯಿಲ್ಲ. ಇದರಲ್ಲಿ ಭಾಗಿಯಾಗುವುದನ್ನು ಜೀವಮಾನದ ಸುವರ್ಣಾವಕಾಶಗಳಲ್ಲಿ ಒಂದು ಎಂದು ಪರಿಗಣಿಸಲಾಗುತ್ತದೆ. ಹೀಗಾಗಿ ಪ್ರಪಂಚದ ಎಲ್ಲೆಡೆಯಿಂದ ಇಲ್ಲಿಗೆ ದಾಂಗುಡಿಯಿಡುವ ವಿದೇಶಿಯರೂ ಸೇರಿದಂತೆ ಪ್ರತಿ ವರ್ಷ ಇಲ್ಲಿಗೆ ಐದು ಲಕ್ಷಕ್ಕಿಂತ ಹೆಚ್ಚಿನ ಪ್ರವಾಸಿಗರು ಭೇಟಿ ನೀಡುತ್ತಾರೆಂದರೆ ಈ ಉತ್ಸವದ ಜನಪ್ರಿಯತೆ ಅರ್ಥವಾದೀತು!

## ಕಚ್‌ನ ರತ್ನ ಗಾಂಧಿ ನು ಗ್ರಾಮ್

ರಣ್ ಉತ್ಸವವು ಟೆಂಟ್ ಸಿಟಿಯ ಚಟುವಟಿಕೆಗಳಿಗಷ್ಟೇ ಸೀಮಿತಗೊಂಡಿಲ್ಲ. ರಣ್ ಹೊರವಲಯದಲ್ಲಿರುವ ಕೆಲವು ಪ್ರಸಿದ್ಧ ಪ್ರವಾಸಿತಾಣಗಳಿಗೂ ಕರೆದೊಯ್ಯುತ್ತಾರೆ. ನಮ್ಮನ್ನು ಜನಪ್ರಿಯ ಕರಕುಶಲ ಗ್ರಾಮ ಗಾಂಧಿ ನು ಗಾಮ್ ಮತ್ತು ಕಾಲೊ ಡೂಂಗರ್‌ಗಳಿಗೆ ಕರೆದೊಯ್ಯಲಾಯಿತು.

ಕಚ್ ಜಿಲ್ಲೆಯ ಲುಡಿಯಾ ಎಂಬ ಚಿಕ್ಕ ಗ್ರಾಮವು ವರ್ಣರಂಜಿತ ಕರಕುಶಲ ವಸ್ತುಗಳು ಮತ್ತು ಜವಳಿಗಳಿಗೆ ಹೆಸರುವಾಸಿ. 2001ರ ಭೂಕಂಪದಲ್ಲಿ ಬಹುತೇಕ ಸಂಪೂರ್ಣ ನಾಶವಾಗಿದ್ದ ಈ ಗ್ರಾಮವನ್ನು ಸಾಂಪ್ರದಾಯಿಕ ಭುಂಗಾ ವಿನ್ಯಾಸದ ಗುಡಿಸಲುಗಳೊಂದಿಗೆ ಪುನರ್ನಿರ್ಮಿಸಲಾಗಿದೆ. ಈ ಗುಡಿಸಲುಗಳು ಹೊರಗಿನಿಂದ ಬಣ್ಣ ಬಣ್ಣದ ಚಿತ್ರಕಲೆ ಮತ್ತು ಕನ್ನಡಿ ಕೆಲಸಗಳನ್ನು ಹೊಂದಿರುವ ಸುಂದರ ಭಿತ್ತಿಚಿತ್ರಗಳಿಂದ ಅಲಂಕೃತಗೊಂಡು ಸದಾ ಕಂಗೊಳಿಸುತ್ತವೆ. ಇತ್ತೀಚೆಗೆ ಕೆಲವು ಪಕ್ಕಾ ಮನೆಗಳು ಸಹ ಅಲ್ಲಲ್ಲಿ ಮೇಲೆದ್ದಿವೆ.

ಈ ಗ್ರಾಮದ ಪುನರ್ನಿರ್ಮಾಣ ಕಾರ್ಯದ ಉಸ್ತುವಾರಿಯನ್ನು ಸಾಬರಮತಿ ಗಾಂಧಿ ಆಶ್ರಮವು ವಹಿಸಿದ್ದರಿಂದ ಈ ಗ್ರಾಮಕ್ಕೆ ಗಾಂಧಿ ಹೆಸರು ಸಹ ಅಂಟಿಕೊಂಡು ಇದು ಗಾಂಧಿ ನು ಗ್ರಾಮ್ (Gandhi's Village) ಎಂದು ಪುನರ್‌ನಾಮಕರಣಗೊಂಡಿತು.

ಧೋರ್ಡೊದಿಂದ 30 ನಿಮಿಷದ ಹಾದಿಯ ಈ ಗ್ರಾಮಕ್ಕೆ ನಮ್ಮನ್ನು ಆಯೋಜಕರು ಬಸ್‌ನಲ್ಲಿ ಕರೆತಂದರು. ಬಸ್ಸಿನಿಂದಿಳಿದು ಗ್ರಾಮದಲ್ಲಿ ಕಾಲಿಡುತ್ತಿದ್ದಂತೆ ಮನೆಯ ಅಂಗಳಗಳಲ್ಲಿ ಮಾರಾಟಕ್ಕಾಗಿ ಜೋಡಿಸಿಡಲಾದ ಕರಕುಶಲ ವಸ್ತುಗಳ ಅಂಗಡಿಗಳು ನಮ್ಮನ್ನು ಸ್ವಾಗತಿಸಿದವು. ಇಲ್ಲಿನ ಕುಶಲಕರ್ಮಿಗಳು ಸ್ಥಳೀಯ ಕರಕುಶಲ ಸಂಪ್ರದಾಯಗಳನ್ನು ಜೀವಂತವಾಗಿಟ್ಟಿದ್ದಾರೆ. ಕನ್ನಡಿ ಕೆಲಸ, ಕಸೂತಿ ಕಲೆ, ವರ್ಣರಂಜಿತ ಹೊದಿಕೆ, ದುಪಟ್ಟಾ, ಸ್ಕರ್ಟ್, ಕೈಚೀಲ, ಹಳ್ಳಿಗಾಡಿನ ಆಭರಣಗಳು ಕಣ್ಮನ ಸೆಳೆಯುತ್ತವೆ. ಜೊತೆಗೆ ಮರದ ಕಲಾಕೃತಿ,